


ಡೆಂಗ್ಯು-ಚಿಕುನ್‌ಗುನ್ಯಾ ರೋಗ ತಡೆಗಟ್ಟಲು ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ಕೆ ಮತುತ ಈಡಿಸ್ ಲಾರ್ವಾ ಸಮೀಕ್ಷಾ ಕಾರ್ಯಕ್ಕೆ ನಗರಾಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ಅಂಗಡಿ ಚಾಲನೆ ನೀಡಿದರು.

# ಡೆಂಗ್ಯು, ಚಿಕುನ್‌ಗುನ್ಯಾ ತಡೆಗಟ್ಟಲು ಜನರ ಸಹಕಾರ ಅಗತ್ಯ-ವಿ.ಆರ್.ಅಂಗಡಿ

ಗದಗ, 4- ಅವಳಿ ನಗರದಲ್ಲಿ ವರದಿಯಾಗುತ್ತಿರುವ ಡೆಂಗ್ಯು ಮತ್ತು ಚಿಕುನ್‌ಗುನ್ಯಾ ರೋಗಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕು. ಕ. ಇಲಾಖೆ, ನಗರಸಭೆ ಗದಗ-ಬೆಟಗೇರಿ ಹಾಗೂ ಮದರ್ ಥೆರೆಸಾ ನರ್ಸಿಂಗ್ ಸ್ಕೂಲ ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಈಡಿಸ್ ಲಾರ್ವಾ ಸಮೀಕ್ಷಾ ಕಾರ್ಯಕ್ಕೆ ಗದಗ-ಬೆಟಗೇರಿ ನಗರಸಭೆಯ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ಅಂಗಡಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಡೆಂಗ್ಯು ಮತ್ತು ಚಿಕುನ್‌ಗುನ್ಯಾ ರೋಗಗಳನ್ನು ಹರಡುವ ಈಡಿಸ್ ಇಜಿಪ್ತ ಸೊಳ್ಳೆಯು ಮನೆಯಲ್ಲಿನ ನೀರಿನ ಸಂಗ್ರಹಗಳಲ್ಲಿ ಸಂತಾನ ಅಭಿವೃದ್ಧಿ ಮಾಡಿಕೊಂಡು ಜನರಿಗೆ ಕಚ್ಚಿ ಒಬ್ಬರಿಂದ ಒಬ್ಬರಿಗೆ ಈ ರೋಗಗಳನ್ನು ಹರಡುವುದರಿಂದ ಸಾರ್ವಜನಿಕರು ತಮ್ಮ ಮನೆಯ ನೀರಿನ ಸಂಗ್ರಹಗಳನ್ನು ವಾರಕ್ಕೆರಡು ಬಾರಿ ಸ್ವಚ್ಛವಾಗಿ ತಿಕ್ಕಿ ತೊಳೆದು ಒಣಗಿಸಿ ನೀರು ತುಂಬಿ ಡೆಂಗ್ಯು ಹಾಗೂ ಚಿಕುನ್ ಗುನ್ಯಾ ರೋಗಗಳನ್ನು ನಿಯಂತ್ರಣ ಮಾಡಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಸಮೀಕ್ಷಣಾಧಿಕಾರಿಗಳಾದ ಡಾ. ವಿಶ್ವನಾಥ ಮಾತನಾಡಿ ಡೆಂಗ್ಯು ಮತ್ತು ಚಿಕುನಗುನ್ಯಾ ಹಾಗೂ ಮಲೇರಿಯಾ ರೋಗಗಳನ್ನು ನಿಯಂತ್ರಿಸಲು ಸಾರ್ವಜನಿಕರ ಸಹಭಾಗಿತ್ವ ಅವಶ್ಯವಿದ್ದು, ಸಮೀಕ್ಷೆಗಾಗಿ ಮನೆ-ಮನೆಗೆ ಬಂದಾಗ ಆರೋಗ್ಯ ಸಿಬ್ಬಂದಿಗೆ ಮತ್ತು ಮದರ ಥೆರೆಸಾ ನರ್ಸಿಂಗ್ ಸ್ಕೂಲ ವಿದ್ಯಾರ್ಥಿಗಳಿಗೆ ಸಹಕಾರ ನೀಡಬೇಕೆಂದು ಸಾರ್ವಜನಿಕರನ್ನು ಕೋರಿದರು.

ಬೆಟಗೇರಿ ಪ್ರಾ.ಅ. ಕೇಂದ್ರದ ವೈದ್ಯಾಧಿಕಾರಿ ಸಹಾಯಕ ಕೀಟಶಾಸ್ತ್ರಜ್ಞ ಅಂಗಡಿ,ನಗರಸಭೆಯ ಪರಿಸರ ಅಭಿಯಂತರ ಸತೀಶ ಮಾಳಗಿ, ನಾರಾಯಣ ನಾಯಕ ಹಾಗೂ ಮದರ ಥೆರೆಸಾ ನರ್ಸಿಂಗ್ ಸ್ಕೂಲ ಪ್ರಾಂಶುಪಾಲರು, ಹಿ.ಪ್ರಾ. ಆ. ಸಹಾಯಕರಾದ ಪರಮೇಶ್ವರ ಹಾಗೂ ಸಿಬ್ಬಂದಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.